ಅನುಬಂಧ 'ಅ'

ಕ್ರ. ಸಂ.	ತಾಲ್ಲೂಕಿನ ಹೆಸರು	1990-91			1991-92			1992-93 (ಡಿಸೆಂಬರ್ ಅಂತ್ಯದವರೆಗೆ)		
		ವೈ	ವಿ	ಅಂಗ	ವೈ	ವಿ	ಅಂಗ	ವೈ	ವಿ	ಅಂಗ
1.	ಕುಂದಾಪುರ	46	131	5	57	104	4	15	42	32
2.	ಉಡುಪಿ	57	175	3	77	222	17	45	141	79
3.	ಕಾರ್ಕಳ	30	78	1	48	96	4	48	48	38
4.	ಮಂಗಳೂರು	94	188	4	114	239	7	65	146	86
5.	ಬಂಟ್ವಾಳ	268	441	24	162	303	24	135	206	112
6.	ಬೆಳ್ತಂಗಡಿ	47	89	3	36	63	10	18	21	31
7.	ಪುತ್ತೂರು	65	99	8	37	71	7	30	52	37
8.	ಸುಳ್ಯ	14	24	0	11	20	0	7	24	12
	ಒಟ್ಟು	621	1225	48	542	1118	73	363	680	427

ಅನುಬಂಧ 'ಆ'

ಕ್ರಮ ಸಂಖ್ಯೆ	ತಾಲ್ಲೂಕಿನ ಹೆಸರು	ವೃದ್ಧಾಪ್ಯ ವೇತನ	ವಿಧವಾ	ಆಂಗವಿಕಲ
1.	ಕುಂದಾಪುರ	11	20	7
2.	ಉಡುಪಿ	11	19	13
3.	ಕಾರ್ಕಳ	10	13	16
4.	ಮಂಗಳೂರು	33	52	18
5.	ಬಂಟ್ವಾಳ	22	19	19
6.	ಬೆಳ್ತಂಗಡಿ	14	14	11
7.	ಪುತ್ತೂರು	15	14	15
8.	ಸುಳ್ಯ	1	2	2
		117	153	101

ಮಂಗಳೂರು ಬೆಂಗ್ರೆ ಮಹಾನಗರ ಪಾಲಿಕೆ ಸೇರ್ಪಡೆ ಕುರಿತು

393 (9): ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ):–

ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮಂಗಳೂರು ಬೆಂಗ್ರೆ ಪ್ರದೇಶದ ಒಟ್ಟು ಜನಸಂಖ್ಯೆ ಎಷ್ಟು;

ಆ) ಈ ಪ್ರದೇಶವನ್ನು ಮಹಾನಗರ ಪಾಲಿಕೆ ಮಂಗಳೂರಿಗೆ ಸೇರ್ಪಡೆ ಮಾಡದೆ ಇರಲು ಕಾರಣವೇನು;

ಇ) ಅಲ್ಲಿನ ಜನತೆಗೆ ಅಭಿವೃದ್ಧಿ ಕಾರ್ಯಗಳು ಇಲ್ಲದೆ ಕಷ್ಟಕ್ಕೂಳಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಬೆಂಗ್ರೆ ಪ್ರದೇಶಗಳನ್ನು ಶೀಘ್ರ ಮಂಗಳೂರು ಮಹಾನಗರ ಪಾಲಿಕೆಗೆ ಸೇರಿಸಿಕೊಳ್ಳಲು ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):–

ಅ) ಅಂದಾಜು 15,000.

ಆ) ಸೂಕ್ತ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಇ) ಬಂದಿದೆ.

ಈ) ಬೆಂಗ್ರೆ ಪ್ರದೇಶವನ್ನು ಮಂಗಳೂರು ಮಹಾನಗರ ಪಾಲಿಕೆಗೆ ಸೇರಿಸಲು ಕ್ರಮ ಜರುಗಿಸಲಾಗುತ್ತಿದೆ.

ಅಂಗನವಾಡಿ ಫಲಾನುಭವಿಗಳಿಗೆ ಪೌಷ್ಟಿಕ ಆಹಾರ

400 (908): ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ):–

ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಅಂಗನವಾಡಿ ಫಲಾನುಭವಿಗಳಿಗೆ ಕೊಡುತ್ತಿರುವ ಪೌಷ್ಟಿಕ ಆಹಾರ ಯಾವುದು;

ಆ) ಸ್ಥಳೀಯ ಪೌಷ್ಟಿಕ ಆಹಾರವನ್ನೊದಗಿಸಲು ಸರ್ಕಾರಕ್ಕೆ ಇರುವ ತೊಂದರೆಗಳಾವುವು;

ಇ) ರಾಜ್ಯದಲ್ಲಿ ಎಲ್ಲಾ ಕಡೆ ಒಂದೇ ರೀತಿಯ ಪೌಷ್ಟಿಕ ಆಹಾರ ನೀಡಲು ಸರ್ಕಾರ ಕ್ರಮ ಕೈಕೊಳ್ಳುವುದೇ ?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು):–

ಅ) 13 ಜಿಲ್ಲೆಗಳ 94 ಶಿಶು ಅಭಿವೃದ್ಧಿ ಯೋಜನೆಗಳಲ್ಲಿ ಕೇರ್ ಕರ್ನಾಟಕದವರು ಕೇರ್ ಆಹಾರ ಸರಬರಾಜು ಮಾಡುವ ಸಿಎಸ್‌ಬಿ:ಸಿಎಸ್‌ಎಂ ಮತ್ತು ಸೋಯಾ ಎಣ್ಣೆಯನ್ನೂ 7 ಜಿಲ್ಲೆಗಳ 46 ಯೋಜನೆಗಳಲ್ಲಿ ಸ್ಥಳೀಯ ಆಹಾರವನ್ನೂ ಅಂದರೆ ಅಕ್ಕಿ, ಕಾಳುಗಳು ಮತ್ತು ದಾಲಿಯಾದಿಂದ ತಯಾರಿಸಲಾದ ಸಿಹಿ ಅಥವಾ ಖಾರ ಪದಾರ್ಥಗಳನ್ನು ಮತ್ತು ಶಕ್ತಿಯುತ ಆಹಾರವನ್ನೂ ಬೆಂಗಳೂರು ನಗರದ 2 ಯೋಜನೆಗಳಲ್ಲಿ ಮಿಲ್ಕ್ ಬ್ರೆಡ್‌ನ್ನೂ ವಿತರಿಸಲಾಗುತ್ತಿದೆ.

ಆ) ಕೇರ್ ಸಂಸ್ಥೆಯು ಶಿಶು ಅಭಿವೃದ್ಧಿ ಯೋಜನೆಗಳ ಪೌಷ್ಟಿಕ ಆಹಾರ ಕಾರ್ಯಕ್ರಮಕ್ಕಾಗಿ ಉಚಿತವಾಗಿ ಆಹಾರ ಪದಾರ್ಥಗಳನ್ನು ನೀಡುತ್ತಿರುವುದರಿಂದ ರಾಜ್ಯ ಸರ್ಕಾರದ ವೆಚ್ಚದಲ್ಲಿ ಬಹಳ ಮಟ್ಟಿಗೆ ಉಳಿತಾಯವಾಗುತ್ತಾದ್ದರಿಂದಲೂ ಮತ್ತು ಸಿಎಸ್‌ಬಿ:ಸಿಎಸ್‌ಎಂ ಹಾಗೂ ಸೋಯ ಎಣ್ಣೆಗಳಲ್ಲಿ ಹೆಚ್ಚು ಪೌಷ್ಟಿಕಾಂಶ ಮಕ್ಕಳ ಪೋಷಣೆಗೆ ಲಭ್ಯವಾಗುವುದರಿಂದಲೂ ಸ್ಥಳೀಯ ಆಹಾರವನ್ನು ಕೊಡುವುದರಿಂದಲೂ ಸರ್ಕಾರದ ಹಣ ವ್ಯಯವನ್ನು ಹೆಚ್ಚು ಮಾಡಬೇಕಾದ್ದರಿಂದ ಭಾರತ ಸರ್ಕಾರದ ಸೂಚನೆಯಂತೆ ಹಾಗೆ ಮಾಡಲಾಗುತ್ತಿದೆ.